# ಮುನ್ನುಡಿ

೧ ಪ್ರೊ. ಎಸ್. ಆರ್. ರಂಗನಾಥನ್ ಅವರ ದ್ವಿಬಿಂದು ವರ್ಗೀಕರಣದ ೭ನೇ ಆವೃತ್ತಿಯ ಪರಿಷ್ಕೃತ ಅವತರಣಿಕೆಯನ್ನು ಕನ್ನಡ ಭಾಷೆಯಲ್ಲಿ ತರಲಾಗಿದೆ. ೧೯೮೭ ರಲ್ಲಿ ಪ್ರಕಟವಾದ ೭ನೇ ಆವೃತ್ತಿಯ ಪರಿಷ್ಕರಣ ಕಾರ್ಯದ ಅಚ್ಚನ್ನು ೧೯೬೭ರಲ್ಲಿ ರಂಗನಾಥನ್‌ರವರೇ ಹಾಕಿಕೊಟ್ಟಿದ್ದರು.

೨ ವಿವಿಧ ಕ್ರಮ ಪಟ್ಟಿಗಳನ್ನು ಕಡ್ಡಾಯವಾಗಿ ಬೇಕಾದಲ್ಲಿ ಅಭಿವೃದ್ಧಿಪಡಿಸಿ ವಿಸ್ತೃತಗೊಳಿಸಲಾಗಿದೆ.

೩ ವಿಷಯಗಳ ವಿಶ್ವದಲ್ಲಿ ಹೊಸ ಹೊಸ ವಿಷಯಗಳ ಬೆಳವಣಿಗೆ ಅತಿ ಶೀಘ್ರವಾಗಿ, ಸ್ಫೋಟಕ ರೀತಿಯಲ್ಲಿ ಆಗುತ್ತಿರುವುದು ಸರ್ವವೇದ್ಯ. ಜ್ಞಾನದ ಹೊಸ ಹೊಸ ಹರಹುಗಳು ವಿಶೇಷಜ್ಞರ ಗಮನ ಸೆಳೆಯುತ್ತಿವೆ ಮತ್ತು ಅವು ಹೊಸದಾಗಿ ಅಥವಾ ಮೊದಲೇ ಇರುವ ವಿಷಯಗಳ ಸಮನ್ವಯದಿಂದ ಆಗಿರಬಹುದು.

೪ ಈ ಆವೃತ್ತಿಯನ್ನು ವಿಶ್ಲೇಷಣ-ಸಂಯೋಜನ (analysis & synthesis) ರೀತ್ಯಾ ಅಭಿವೃದ್ಧಿಗೊಳಿಸಲಾಗಿದೆ. ಇದನ್ನು ಮೂರು ಕ್ರಿಯಾಸ್ತರಗಳ ಅಂದರೆ ಕಲ್ಪಿತ ಸ್ತರ, ಶಾಬ್ದಿಕ ಸ್ತರ ಹಾಗೂ ಸಾಂಕೇತಿಕ ಸ್ತರಗಳೆಂಬ ಆಧಾರ ಸೂತ್ರಗಳ ಅನ್ವಯ ರಚಿಸಲಾಗಿದೆ. ಈ ಮೂರು ಕ್ರಿಯಾಸ್ತರಗಳ ಕೆಲಸವನ್ನು ಮಿತವ್ಯಯ ಹಾಗೂ ಸಮಂಜಸತೆ ಅಥವಾ ಸಮಸೂತ್ರತೆಯ ನಿಬಂಧನೆಯಂತೆ ಸಂಯೋಜಿಸಲಾಗಿದೆ. ವರ್ಗಾಂತರಗಳ ಶ್ರೇಣಿ ಬದ್ಧತೆಯನ್ನು ಸಾಧ್ಯವಾದಷ್ಟು ಪಾಲಿಸಲಾಗಿದೆ.

೫ ಈ ಆವೃತ್ತಿಯಲ್ಲಿ ಕ್ರಮಪಟ್ಟಿಗಳನ್ನು ವಿಸ್ತರಿಸಿದ್ದರೂ ವರ್ಗೀಕರಣ ಮಾಡುವವರು ಗ್ರಂಥಾಲಯದ ಬಳಕೆದಾರರಿಗೆ ಬೇಕಿರುವಷ್ಟನ್ನು ಮಾತ್ರ ನಿರೂಪಿಸಬಹುದು. ವಿಷಯಗಳ ಸಮಗ್ರತೆಯನ್ನು ಸಂಪೂರ್ಣವಾಗಿ ಬಿಂಬಿಸುವಷ್ಟು ಆಳದಲ್ಲಿ ವರ್ಗಾಂಕವನ್ನು ನೀಡಬಹುದು.

ಬೆಂಗಳೂರು
ಶಾರದಾರಂಗನಾಥನ್‌ಎಂಡೋಮೆಂಟ್
ಫೆಬ್ರವರಿ ೨೪, ೨೦೦೦ ಫಾರ್ ಲೈಬ್ರರಿ ಸೈನ್ಸ್, ಬೆಂಗಳೂರು